ಪಯಣವನ್ನು ಹಿತಗೊಳಿಸುವಲ್ಲಿ ಆಹಾರ ಸದಾ ಸಾಥ್ ನೀಡುತ್ತದೆ. ರೈಲುಜರ್ನಿ ದೀರ್ಘವಿರುವುದರಿಂದಲೊ, ತಿನ್ನುಣ್ಣಲು ಮನೆಯಂತೆ ಡಬ್ಬಿಯಲ್ಲಿ ಸ್ಥಳಾವಕಾಶ ಇರುವುದರಿಂದಲೊ, ಅದು ಮುದಕೊಡುತ್ತದೆ. ಈ ವಿಷಯದಲ್ಲಿ ನಾನು ಮೂರೂ ಬಿಟ್ಟವನು. ನನ್ನ ಮುಖ ರಚನೆಯಲ್ಲೇ ಕರುಣೆಯುಕ್ಕಿಸುವ ಲಕ್ಷಣವಿದೆಯೆಂದು ಬಾನು ಆರೋಪಿಸುವುದುಂಟು. ಇದರಲ್ಲಿ ಹುರುಳಿಲ್ಲ. ಜನರಲ್ಲಿ ಹಂಚಿತಿನ್ನುವ ಗುಣ ಸಹಜವಾಗಿದೆ; ಕಾಗೆ ಕಂಡರೆ ಕೂಗಿ ಕರೆಯದೇ ತನ್ನ ಬಳಗವ? ಯಾರಿಗೆ ಗೊತ್ತು, ಜನ ನನ್ನಲ್ಲಿ ಕಳೆದುಹೋದ ಯಾವುದೊ ಬಂಧುವಿನ ಬಿಂಬ ಕಾಣುತ್ತಿರಬಹುದು. ಅದೊಂದು ಮುಂಬೈ ಪಯಣ. ಮಳೆಬಿದ್ದು ಬೋಗಿ ಥರಥರಿಸುತ್ತಿತ್ತು. ಕುಟುಂಬವೊಂದು ಧಾರವಾಡದಲ್ಲೇರಿ ಎದುರಿನ ಸೀಟುಗಳಲ್ಲಿ ಬೀಡುಬಿಟ್ಟಿತು. ಸ್ಟೇಶನ್ ಬಿಟ್ಟೊಡನೆ ಯಜಮಾನತಿ ದೊಡ್ಡ ಕವರನ್ನು ಬಿಚ್ಚಿದಳು. ಬೆಳ್ಳುಳ್ಳಿ ಕರಿಬೇವು ಸಾಸಿವೆ ಶೇಂಗಾಬೀಜ ಒಣಕೊಬರಿ ಕೆಂಪುಮೆಣಸು ಕರಿದುಹಾಕಿದ್ದ ಚುರಮರಿ, ಪರಿಮಳವನ್ನು ಅಲೆಯಾಗಿ ಹಬ್ಬಿಸಿತು. ಎಲ್ಲರೂ ದಿನಪತ್ರಿಕೆ ಹರಿದು ಪತ್ರಾವಳಿ ಮಾಡಿಕೊಂಡರು. ಆಕೆ ಎರಡೆರಡು ಹಿಡಿ ಒಗೆದಳು. ಯಜಮಾನ ಉಳ್ಳಾಗಡ್ಡಿ ತುಂಡನ್ನೂ ಉಪ್ಪುತುಂಬಿ ಕರಿದ ಮೆಣಸಿನಕಾಯನ್ನೂ ಮೇಲಿಟ್ಟನು. ಹಂಚಿಕೆ ಮುಗಿಸಿ ಆಕೆ ಮುಕ್ಕಲು ಕುತ್ತಿಗೆ ಎತ್ತುವಾಗ, ಅಟ್ಟದಲ್ಲಿ ಕುಳಿತಿದ್ದ ನನ್ನ ಮುಖ ನಡುಹಗಲ ಚಂದ್ರಬಿಂಬದಂತೆ ಕಂಡಿತು. ಎಷ್ಟಾದರೂ ತಾಯ್ಗರುಳು. 'ನಿನಗೀಸು ಕೊಡಲೇನಪ್ಪಾ' ಎಂದಿತು. ಗೋಣುಹಾಕಿದೆ. ಮೂರು ಸೆರೆ ಸಿಕ್ಕವು. ಚಹದವನು ಬಂದಾಗ, ಎಲ್ಲರಿಗೂ ಬಿಸಿಚಹ ಕೊಡಿಸಿ ಮುಯ್ಯಿ ಮುಟ್ಟಿಸಿದೆ. ಚಹವನ್ನು ಈಂಟುತ್ತ ತಾಯ್ಗರುಳು ನುಡಿಯಿತು: 'ರೊಟ್ಟಿ ಪಲ್ಲೆ ಉಂಡಿ ರಗಡದಾವ. ರೈಲ್ವೇ ಊಟಕ್ಕೆ ಆಡರ್ ಮಾಡಬ್ಯಾಡಪ್ಪ. ಬೇಸಿರಲ್ಲ.' ಮರುಮಾತಿಲ್ಲದೆ ಒಪ್ಪಿಗೆಯಿತ್ತೆ. ಅನಾಮಿಕ ಕುಟುಂಬದ ಸದಸ್ಯನಾದೆ.

ಟೀ–ಕಾಫಿಯ ಬೀಗದ ಕೈಯನ್ನು ಬಳಸಿ ಊಟತಿಂಡಿಯ ಭಂಡಾರವನ್ನು ಸೂರೆ ಹೊಡೆಯುವುದು ಅಗದೀ ಸುಲಭ. ಅದೊಂದು ಕಾಶಿಯಾತ್ರೆ ತಂಡ. ನಮ್ಮೆದುರು ವೃದ್ಧದಂಪತಿಯನ್ನು ಕೂರಿಸಿ ಬಾಕಿ ಸಂಸಾರಸ್ಥರೂ ಪಡ್ಡೆಗಳೂ ಪಕ್ಕದ ಬೋಗಿಯಲ್ಲಿ ಅಟ್ಟಹಾಸ ನಡೆಸಿದ್ದರು. ಅಜ್ಜಅಜ್ಜಿ ನಮ್ಮನ್ನು ನಾವು ಅವರನ್ನೂ ಮಿಕಿಮಿಕಿಸುತ್ತಿದ್ದೆವು. ತುಸುಹೊತ್ತಿಗೆ ಅಟ್ಟಹಾಸಿಗಳು ತಿಂಡಿ ವಸೂಲಿಗೆ ಬಂದರು. 'ಕಾಶಿ ಬರೋತಂಕ ಪ್ರಾಣಹೋದರೂ ಟ್ರಂಕ್ ಬಿಚ್ಚಲ್ಲ' ಎಂದು ಅಜ್ಜಿ ವಾನರಸೇನೆಯನ್ನು ಹಿಂದಕ್ಕಟ್ಟಿತು. ನಾನು ಕಾಫಿಯವನು ಬಂದಾಗ ದಂಪತಿಗೂ ಕೊಡಿಸಿದೆ. ಕೂಡಲೇ ಅಜ್ಜಿ 'ತಡಿಯಪ್ಪ ಬಿಸಿಕಾಫಿ ಜತೆ ಕೋಡುಬಳೆ ಚಕ್ಕಲಿ ಚೆನ್ನಾಗಿರುತ್ತೆ' ಎಂದಿದ್ದೇ ಲಗುಬಗೆಯಿಂದ ಟಿನ್ನಿನ ಟ್ರಂಕಿಳಿಸಿ, ತಾಳಿಯಲ್ಲಿ ನೇಲುತ್ತಿದ್ದ ಬೀಗದೆಸಳಿಂದ ಬಾಗಿ ಕೀಲಿತೆಗೆದು ಬೊಗಸೆ ತುಂಬಿಸಿತು. ಜನ ಸಣ್ಣಪ್ರೀತಿಗೆ ಎಷ್ಟೊಂದು ಹಸಿದಿರುತ್ತಾರೆ! ನಿಸ್ಸಂತಾನದ ನೋವನ್ನು ಅಜ್ಜಿ ತೋಡಿಕೊಂಡಿತು. ನಾವು ಆಕೆಯ ಮಕ್ಕಳಾದೆವು. ಪಯಣ ಹೊಸ ನಂಟನ್ನು ಕಟ್ಟಿಕೊಡುತ್ತದೆ; ರಕ್ತಸಂಬಂಧಿಗಳು ಕೊಡಲಾರದ ಅಕ್ಕರೆ ಕೊಡುತ್ತದೆ. ಮುಂದೆ ಭೇಟಿಯಾಗಲಾರೆವು ಎಂದು ಗೊತ್ತಿದ್ದರೂ ಕರುಳತಂತಿ ಮಿಡಿದು ನಾದ ಹೊಮ್ಮಿಸುತ್ತದೆ.

ಪಯಣವು ಅನಿರೀಕ್ಷಿತವಾಗಿ ಹುಟ್ಟಿಸುವ ಸಂತೋಷದಂತೆಯೇ ದುಗುಡವನ್ನೂ ಹೊರಿಸಬಲ್ಲುದು. ಸಂಜೆಯ ಬೆಂಗಳೂರಿನ ಸಿಟಿಬಸ್ಸು ನಿಧಾನವಾಗಿ ಚಲಿಸಲು ಕಾರಣ, ಟ್ರಾಫಿಕ್ಕಲ್ಲ, ಪಯಣಿಗರ ದಣಿವಿನ ಭಾರವೆಂದೇ ನನಗೆ ಅನಿಸುತ್ತಿರುತ್ತದೆ. ಮುಂಜಾನೆ ಹೊರಟಾಗಿದ್ದ ಜೀವಂತಿಕೆಯನ್ನು ಕಚೇರಿ ಕಿತ್ತುಕೊಂಡಂತೆ ಜನರ ಮುಖಬಾಡಿ ದೇಹಬೆವರಿ ಮನಸು ಬಳಲಿರುತ್ತದೆ. ಬಾಳಬಂಡಿ ಎಳೆಯಲು ಎಷ್ಟೊಂದು ಸೆಣಸಾಟ? ಸತ್ತವರನ್ನು ನೋಡಲು